ಉದಯವಾಣಿ
ಕನ್ನಡ ದಿನಪತ್ರಿಕೆ

## ■ 10 ದಿನಗಳ ರಂಗ ತರಬೇತಿ ಶಿಬಿರ

**ಬೆಂಗಳೂರು:** ರಂಗಭೂಮಿಯ ಚಟುವಟಿಕೆಯಲ್ಲಿ ಯುವ ಜನಾಂಗ ಹೆಚ್ಚು ಆಸಕ್ತರಾಗುವಂತೆ ಪ್ರೇರೇಪಿಸಿ ಪ್ರೋತ್ಸಾಹಿಸಲು ಜೈನ್ ವಿಶ್ವವಿದ್ಯಾಲಯ ಮತ್ತು ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಸಿಎಂಸಿ) ಸಂಸ್ಥೆ ಜಂಟಿಯಾಗಿ 10 ದಿನಗಳ ರಂಗ ಶಿಬಿರ ಆಯೋಜಿಸಿದೆ. ಶಿಬಿರದ ಬಳಿಕ ಮಾ. 1 ಮತ್ತು 2ರಂದು ಸಿಎಂಸಿಯಲ್ಲಿ 20 ನಿಮಿಷಗಳ ರಂಗ ಪ್ರದರ್ಶನ ನಡೆಯಲಿದೆ. ಪದವಿ ಕಾಲೇಜಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮಾತ್ರ ರಂಗ ಶಿಬಿರ ಮೀಸಲಿರಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಜ. 31 ಕೊನೆಯ ದಿನಾಂಕವಾಗಿದ್ದು, ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ದೂ.ಸಂ. 080-43430200 ಸಂಪರ್ಕಿಸಬಹುದು.